**Sri C. M. ARUMUGHAM.**—As a protest against the ruling of the Chair, we are walking out.

*[The P.S.P. Members, Sri C. M. Arumugham, Sri C. J. Muckannappa and others on the Opposition side withdrew from the House].*

ಶ್ರೀ ಡಿ. ಟಿ. ಸೀತಾರಾಮರಾವ್.—ಇವೊತ್ತು ಶ್ರೀರಾಮನವಮಿ. ಅರ್ಧಗಂಟೆ ಕಾಲ ವಾದರೂ ರಾಮಧ್ಯಾನ ಮಾಡೋಣವೆಂದರೆ ಅವಕಾಶ ಕೊಡಲಿಲ್ಲ. ಬೆಳಗ್ಗೆ ಸಭೆ ಸೇರೋಣವೆಂದರೆ, ಅದನ್ನು ಕೇಳದೆ ಮಧ್ಯಾಹ್ನ ಸೇರುವಂತೆ ಮಾಡಿದರಿ ಅದರಿಂದಾಗಿ ಈ ಕಹಿ ಪ್ರಸಂಗವೆಲ್ಲ ನಡೆದು ಹೋಯಿತು. ಈಗಲಾದರೂ ರಾಮಧ್ಯಾನಮಾಡಲು ಅರ್ಧಗಂಟೆ ಕಾಲ ಸಭೆಗೆ ವಿರಾಮ ಕೊಟ್ಟರೆ ನರಿಯಾಗಿ ನಡೆದೀತು ಎಂದು ಹೇಳುತ್ತೇನೆ.

ಶ್ರೀ ಬಿ. ಕೆ. ನಾಗೂರ್ (ಬಿಜಾಪುರ).—ಈಗ ಮಾಡಿದ್ದಕ್ಕೆ ಇಷ್ಟರಲ್ಲಿಯೇ ಮುಗಿಯಿತು. ಬೆಳಿಗ್ಗೆ ಮಾಡಿದ್ದರೆ ರಕ್ತಪಾತವಾಗುತ್ತಿತ್ತೋ ಏನೋ?

ಶ್ರೀ ಎಸ್. ನುಚ್ಚಯ್ಯನಾಯಕ್ (ಪುತ್ತೂರು).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರುವ ಎರಡು ಮೂರು ಡಿಮ್ಯಾಂಡುಗಳನ್ನೂ ಸಮರ್ಥಿಸುತ್ತ ನಾನು ಒಂದೆರಡು ಸೂಚನೆಗಳನ್ನು ಕೊಡಬಯಸುತ್ತೇನೆ. ಆಸ್ಪತ್ರೆಗಳ ಸಂಬಂಧದಲ್ಲಿ ಒಂದೇ ಒಂದು ವಿಷಯವನ್ನು ಹೇಳುತ್ತೇನೆ. ಅದೇನೆಂದರೆ ನಾನು ದಕ್ಷಿಣ ಕನ್ನಡ ಜಿಲ್ಲೆಯ ಕೆಲವೊಂದು ಆಸ್ಪತ್ರೆಗಳನ್ನು ನೋಡಿದ್ದೇನೆ. ಜಿಲ್ಲೆಯ ಎಲ್ಲ ಆಸ್ಪತ್ರೆಯಲ್ಲಿರುವ ಎಲ್ಲ ಹಾಸಿಗೆಗಳೂ ತೆಂಗಿನ ನಾರಿನಿಂದ ಮಾಡಿದುವಾಗಿವೆ. ಅದು ಉಷ್ಣಪ್ರದೇಶವಾದ್ದರಿಂದ ಇದರಿಂದ ಬಹಳ ತೊಂದರೆ ಇದೆ. ಅಲ್ಲದೆ ಈ ಹಾಸಿಗೆಗಳಿಗೆ ಹಳೆಯ ಹರಿದ ಅಥವಾ ಕೊಳಕಾದ ಖಾದಿಬಟ್ಟೆಯನ್ನು ಹಾಕಿರುತ್ತಾರೆ. ನನಗೆ ಖದ್ದರ್ ಬಟ್ಟೆಯಮೇಲೆ ಪ್ರೀತಿ ಇದ್ದರೂ ಕಾಯಿಲೆಯವರಿಗೆ ಇಂತಹ ಕೊಳೆಬಟ್ಟೆಯನ್ನು ಮತ್ತು ಒರಟು ಬಟ್ಟೆಗಳನ್ನು ಹಾಸುವುದು ಸರಿಯಲ್ಲ.

2-30 P.M.

ಕಾಯರ್ ಬೆಡ್ ತೆಗೆದು ಹಾಕಿ ಕಾಟನ್ ಬೆಡ್ ಹಾಕಬೇಕು ಎಂದು ನಾನು ಸೂಚನೆ ಕೊಡಲಿಚ್ಛಿಸುತ್ತೇನೆ. ಮೊನ್ನೆ ಪ್ರಶ್ನೋತ್ತರಗಳ ಕಾಲದಲ್ಲಿ ನಮಗೆ ಎಲ್ಲರಿಗೂ ತಿಳಿದಿದೆ. 614 ಮಂದಿ ಹಂಗಾಮಿ ಮತ್ತು ಖಾಯಂ ಹುದ್ದೆಗೆ ಡಾಕ್ಟರುಗಳ ಅಭಾವ ಇದೆ ಎಂದು ಮೆಡಿಕಲ್ ಮತ್ತು ಹೆಲ್ತ್ ಡಿಪಾರ್ಟ್‌ಮೆಂಟ್ ಎರಡರಲ್ಲೂ ಕೂಡ 614 ಮಂದಿ ಡಾಕ್ಟರುಗಳ ಅಭಾವ ಇದೆಯೆಂದು ಹೇಳುತ್ತಿರಿ. ಅದಕ್ಕೆ ಆದಷ್ಟು ತ್ವರಿತದಿಂದ ಡಾಕ್ಟರುಗಳನ್ನು ಭರ್ತಿ ಮಾಡಲು ಪ್ರಯತ್ನ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಇನ್ನು ಏನು ಹೆಚ್ಚಿಗೆ ಹೇಳಬಯಸದೆ ರೂರಲ್ ಡೆವಲಪ್‌ಮೆಂಟ್ ವಿಚಾರದಲ್ಲಿ ಒಂದೆರಡು ಸೂಚನೆಗಳನ್ನು ಕೊಡಬಯಸುತ್ತೇನೆ. ಈ ಬಾಬಿಗೆ 1,65,85,000 ರೂಪಾಯಿಗಳನ್ನು ಮೀಸಲಾಗಿಟ್ಟಿದೆ. ಇದರಲ್ಲಿ ಗುಡ್ಡಗಾಡಿನ ಜನರ ವಿಚಾರವಾಗಿ ಹೆಚ್ಚು ಹೇಳಬೇಕೆಂದಿದ್ದೇನೆ. ಈ ಅಧಿವೇಶನದಲ್ಲಿ ಇಪ್ಪತ್ತು ದಿವಸಗಳಿಂದ ಬಜೆಟ್ಟಿನ ಮೇಲೆ ಮಾತನಾಡುವಾಗ ಅಥವಾ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಗುಡ್ಡಗಾಡಿನ ಜನರ ವಿಷಯವಾಗಿ ಯಾರೊಬ್ಬರೂ ಒಂದು ಮಾತನ್ನು ಎತ್ತಲಿಲ್ಲ ಎಂದು ನಾನು ಬಹಳ ಬೇಸರದಿಂದ ಹೇಳಬೇಕಾಗಿದೆ. ಷೆಡ್ಯೂಲ್ ಟ್ರೈಬಿನ ಪರವಾಗಿ ನಾನೊಬ್ಬನೆ ಇದ್ದು, ಷೆಡ್ಯೂಲ್ ಕ್ಯಾಸ್ಟಿನ ಪರವಾಗಿ ಎಲ್ಲರೂ ಮಾತನಾಡುತ್ತಾರೆ. ಆದರೆ ಷೆಡ್ಯೂಲ್ ಟ್ರೈಬಿನ ವಿಚಾರವಾಗಿ ಯಾರೂ ಮಾತನಾಡದೆ ಇರುವುದರಿಂದ ನಾನು ಆ ವಿಚಾರವಾಗಿ ಸಲಹೆ ಕೊಡುತ್ತೇನೆ. ಷೆಡ್ಯೂಲ್ ಟ್ರೈಬಿನ ವಿಚಾರವಾಗಿ ಯಾರೊಬ್ಬರೂ ಸಲಹೆಯನ್ನು ಕೊಡದೆ ಇರುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಅದು ಏತಕ್ಕೆಂದರೆ, ಷೆಡ್ಯೂಲ್ ಟ್ರೈಬಿನಲ್ಲಿ ಬಹಳ ಮಂದಿ ಅವಿದ್ಯಾವಂತರಿದ್ದಾರೆಂದು ಶ್ರೀ ನಾಗನಗೌಡರ ರಿಪೋರ್ಟಿನಿಂದ ಗೊತ್ತಾಗುತ್ತದೆ. ಒಂದು ಸಾವಿರದಲ್ಲಿ ಎರಡು ಮಂದಿ ಅಕ್ಷರಸ್ಥರಿದ್ದಾರೆಂದು ಅವರ ರಿಪೋರ್ಟಿನಿಂದ ಗೊತ್ತಾಗುತ್ತದೆ. ಕೆಲವರಿಗೆ ಹೆಸರು ಬರೆಯುವುದು ರುಜು ಹಾಕುವುದು ಮಾತ್ರ ಬರುತ್ತದೆ. ಇಂಥವರನ್ನು ಸಹ ವಿದ್ಯಾವಂತರೆಂದು ತೆಗೆದುಕೊಂಡರೆ ಬಹುದು. ಒಂದು ಸಾವಿರ ಮಂದಿಯಲ್ಲಿ ಎರಡು ಮಂದಿ ವಿದ್ಯಾವಂತರಿದ್ದಾರೆಂದರೆ, ಈ ಜನರು ಎಷ್ಟು ಮುಂದುವರಿದಿದ್ದಾರೆ ಎಂದು ತಿಳಿದು ಕೊಳ್ಳಬಹುದು. ಸೆಂಟ್ರಲ್ ಗೌರ್ನಮೆಂಟಿನವರು ಷೆಡ್ಯೂಲ್ ಟ್ರೈಬಿನವರಿಗೆ ಸಾಕಷ್ಟು ಗಮನವನ್ನು ಕೊಟ್ಟಿರುವುದರಿಂದ ಈ ಸರ್ಕಾರದವರೂ ಅದರ ಬಗ್ಗೆ ಬಜೆಟ್ಟಿನಲ್ಲಿ ಹಣವನ್ನು ಒದಗಿಸಿರುತ್ತಾರೆ. ಆದರೆ ನಮ್ಮ ಸರ್ಕಾರದವರು ಸರಿಯಾಗಿ ಗಮನ ಕೊಡುವುದಿಲ್ಲ ಎಂದು ಬೇಸರದಿಂದ ಹೇಳಬೇಕಾಗಿದೆ. ಈ ಪಂಗಡದವರು, ಗುಡ್ಡಗಾಡಿನಲ್ಲಿ ಗಿರಿ ಪರ್ವತದಲ್ಲಿ ಇರುತ್ತಾರೆ. ಪಟ್ಟಣ ಪ್ರದೇಶದಲ್ಲಿ ಆಧುನಿಕ ವ್ಯವಹಾರವು ನಡೆಯುವ ಕಡೆ ಅವರು ಪ್ರವೇಶ ಮಾಡುವುದಿಲ್ಲ. ಅವರು ಬಹಳ ಹಿಂದೆ ಇದ್ದಾರೆ. ಅವರನ್ನು ಮುಂದೆ ತರುವುದಕ್ಕೆ ಬಹಳ ನಿರ್ದಿಷ್ಟವಾದ ಕಾರ್ಯಕ್ರಮವನ್ನಿಟ್ಟುಕೊಂಡು ಬಜೆಟ್ಟಿನಲ್ಲಿ ಹಣವನ್ನು ಒದಗಿಸಿದರೆ ಸಾಲದು. ಬಹಳ ಮುತವರ್ಜಿಯಿಂದ ಕೆಲಸ ಮಾಡುವುದಕ್ಕೆ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಅದಕ್ಕೆ ತಕ್ಕ ಅಧಿಕಾರಿಗಳನ್ನು ನೇಮಿಸಬೇಕು. ಮತ್ತು ಸಹಾನುಭೂತಿಯುಳ್ಳವರನ್ನು ಕೆಲಸಕ್ಕೆ ನೇಮಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಇವರಿಗೆ ಸರ್ಕಾರದವರು ಸಾಕಷ್ಟು ಹಣವನ್ನು ಒದಗಿಸಿದರೂ ಅದನ್ನು ತಮಗೆ ಪಡೆದುಕೊಳ್ಳಲಿಕ್ಕೆ ಗೊತ್ತಿಲ್ಲ, ಅವರಿಗೆ ತಮ್ಮೇ ಹೊರತು ಇತರರಲ್ಲಿ ನಂಬಿಕೆ ಇರುವಗ್ಯೂ ಪರಿಜ್ಞಾನವಿಲ್ಲ. ಸ್ವಲ್ಪಮಟ್ಟಿಗೆ ಅವರಿಗೆ ಮೋಸವಾದದ್ದು ನಾನು ಖುದ್ದು ನೋಡಿದ್ದೇನೆ, ಧರ್ಮಾರ್ಥವಾಗಿ ಎತ್ತುಕೊಡುತ್ತಾರೆ, ಬೀಜ ಕೊಡುತ್ತಾರೆ. ಎಂದರೆ ಅವರು ನಂಬುವುದಿಲ್ಲ. ಅವಿಶ್ವಾಸಕ್ಕೆ ಸಿಕ್ಕಿ, ಜನರು ವಂಚಿಸಿದ್ದರಿಂದ ಮೋಸ ಹೋಗಿದ್ದಾರೆ. ಸಹಾನುಭೂತಿಯುಳ್ಳ ಅಧಿಕಾರಿಗಳು ಇರುವುದು ಒಳ್ಳೆಯದು ಎಂದು ಹೇಳುತ್ತೇನೆ. ಆದ್ದರಿಂದ ಅದಕ್ಕೆ ಸಾಕಷ್ಟು ಪ್ರಚಾರ ಆಗಬೇಕು. ಬಜೆಟ್ಟಿನಲ್ಲಿ ಪ್ರಚಾರಕ್ಕೆ ಹಣವನ್ನು ಇಡದೆ ಇರುವುದು ಆಶ್ಚರ್ಯ. ಆದರೆ ಷೆಡ್ಯೂಲ್ ಕ್ಯಾಸ್ಟಿನವರಲ್ಲಿ ಪಬ್ಲಿಸಿಟಿಗಾಗಿ ಹಣವನ್ನು ಇಟ್ಟಿದ್ದಾರೆ. ಅದೇ ರೀತಿ ಷೆಡ್ಯೂಲ್ ಟ್ರೈಬಿಗೂ ಇಡಬೇಕು. ಹರಿಜನರ ಉದ್ಧಾರ ಎಂದು ಹೇಳಿ ಎಷ್ಟೋ ವರ್ಷಗಳಿಂದ ಗಾಂಧೀಜಿಯವರ ಆಶೀರ್ವಾದದಿಂದ ಮುಂದುವರಿಯುತ್ತಾ ಬರುತ್ತಿದೆ. ಅದಕ್ಕೆ ಸರ್ಕಾರದ ಅಧಿಕಾರಿಗಳು, ಮುಖಂಡರು ಅಲ್ಲಲ್ಲಿ ಎಲ್ಲರೂ ಗಮನ ಕೊಡು